ಪ್ರಬಲ ಭಾಷೆಗಳಾದ ಜರ್ಮನ್ ಮತ್ತು ಫ್ರೆಂಚ್ ಇದೆ. ವ್ಯಾವಹಾರಿಕವಾಗಿ ಕಲಿಯಬೇಕಾದ ಇಂಗ್ಲೀಷಿದೆ. ಇವುಗಳ ನಡುವೆಯೇ ಚೆಕ್, ಹಂಗೇರಿಯನ್, ಫ್ಲೆಮಿಶ್ ಭಾಷೆಗಳು ಬದುಕುಳಿಯಬೇಕು. ಸೋವಿಯತ್ ರಷ್ಯಾದ ಏಕೀಕರಣದಲ್ಲಿ ಅಲ್ಲಿದ್ದ ವೈವಿಧ್ಯ ಬಲಿಯಾಯಿತು. 1983ರಲ್ಲಿ ಬರೆಯುತ್ತಾ, ಉಕ್ರೇನ್ ಎನ್ನುವ ದೇಶ ಸ್ಮೃತಿಪಟಲದಿಂದ ಸಂಪೂರ್ಣ ಮಾಯವಾಗಿ ಅಸ್ತಿತ್ವವಿಲ್ಲದಂತಾಗುತ್ತಿದೆ ಎನ್ನುತ್ತಾನೆ. ಅದಕ್ಕೆ ಮೂಲ ಕಾರಣ ರಷ್ಯನ್ ಭಾಷೆಯನ್ನು ಬಲವಂತವಾಗಿ ಹೇರಿದ್ದಲ್ಲ. ಬದಲಿಗೆ ಒಂದು ರಾಷ್ಟ್ರ ಅದರ ಆಡಳಿತ ಭಾಷೆ ಮತ್ತು ಅದರ ವ್ಯಾವಹಾರಿಕತೆಯಲ್ಲಿಯೇ ನಮ್ಮ ಅಸಲಿ ಭಾಷೆಗಳು ಕಳೆದುಹೋಗಬಹುದು ಎಂದು ವಾದಿಸುತ್ತಾನೆ. ಉಕ್ರೇನ್ ನಾಪತ್ತೆಯಾಯಿತು ಎಂದು ಘೋಷಿಸಿದ ಕುಂದೆರಾನ ಮಾತು 1990ರ ದಶಕದ ವೇಳೆಗಾಗಲೇ ಸುಳ್ಳಾಗಿತ್ತು. ಸೋವಿಯತ್ ರಷ್ಯಾ ವಿಘಟಿಸಿ ಮತ್ತೆ ಭೂಗೋಳ ಬದಲಾಯಿತು. ಈಗ ರಷ್ಯಾಕ್ಕೂ ಉಕ್ರೇನಿಗೂ ಯುದ್ಧ ನಡೆಯುತ್ತಿದೆ. ಆ ಯುದ್ಧಕ್ಕೆ ಇತರ ಕಾರಣಗಳ ಜೊತೆ ಸಾಂಸ್ಕೃತಿಕ ಕಾರಣಗಳೂ ಇವೆ.

ನಮ್ಮ ಸಂದರ್ಭದಲ್ಲಿ ಹಿಂದಿಯನ್ನು ರಾಜಭಾಷೆಯೆಂದು ದೇಶದಾದ್ಯಂತ ಪ್ರಸಾರ ಮಾಡಿದರೆ, ದಕ್ಷಿಣ ಭಾರತದ ಪ್ರತಿಕ್ರಿಯೆ ಉತ್ತರಕ್ಕಿಂತ ಯಾಕೆ ಭಿನ್ನವಾಗಿದೆ? ಹಿಂದಿಯ ಬಗೆಗಿರುವ ವಿರೋಧ ಇಂಗ್ಲೀಷಿನ ಬಗೆಗೆ ಯಾಕಿಲ್ಲ? ಹಿಂದಿ ಭಾರತದ ಭಾಷೆ, ಇಂಗ್ಲೀಷು ವಸಾಹತುಶಾಹಿಗಳ ಭಾಷೆ, ಹೀಗಾಗಿ ದಕ್ಷಿಣ ಭಾರತೀಯರು ಇಂಗ್ಲೀಷಿಗಿಂತ ಹಿಂದಿಯನ್ನೇ ಯಾಕೆ ಲಿಂಕ್ ಭಾಷೆಯನ್ನಾಗಿ ಮಾಡಿಕೊಳ್ಳಬಾರದು ಎನ್ನುವ ಪ್ರಶ್ನೆ ಆಗಾಗ ಏಳುತ್ತದೆ. ಇದಕ್ಕೆ ಎರಡು ಕಾರಣಗಳಿರಬಹುದು. ಒಂದು, ಸಂಸ್ಕೃತಿ ಭಾಷೆಯನ್ನು ಕಾಪಾಡಿಕೊಳ್ಳಬೇಕೆನ್ನುವ ಬಯಕೆ ಮಾತೃಭಾಷೆಗೆ ಪ್ರಾಧಾನ್ಯತೆ ಕೊಡುತ್ತದೆ. ಭಾಷಾವಾರು ಪ್ರಾಂತಗಳಾಗಿ ನಮ್ಮ ರಾಜ್ಯ ರಚನೆಯಾಗಿರುವುದರಿಂದ ಹಾಗೂ ರಾಜ್ಯಸರ್ಕಾರಗಳೂ ಈ ಭಾಷೆಯನ್ನು ಉಪಯೋಗಿಸುವುದರಿಂದ ಅದಕ್ಕೊಂದು ವ್ಯಾವಹಾರಿಕವಾದ ಚೌಕಟ್ಟೂ ಇದೆ. ಬಹುಶಃ, ಉತ್ತರ ಭಾರತದಲ್ಲಿ ಹಿಂದಿ ಹೆಚ್ಚಿನ ರಾಜ್ಯಗಳ ಆಡಳಿತ ಭಾಷೆಯಾಗಿರುವುದರಿಂದ, ವೈಶಾಲಿ, ಅವಧಿ, ಮೈಥಿಲಿಗಳ ಬೆಳವಣಿಗೆ ತುಸು ಕುಂಠಿತವಾಗಿರಬಹುದೇನೋ?

ಅಲ್ಲಿಂದ ಮುಂದಕ್ಕೆ ಮಿಕ್ಕ ಪ್ರಪಂಚದೊಂದಿಗೆ ವ್ಯವಹರಿಸಲು ಬೇಕಾದ ವ್ಯಾವಹಾರಿಕ ಭಾಷೆ ಇಂಗ್ಲೀಷೇ ಯಾಕೆ ಉತ್ತಮವಾಗುತ್ತದೆಂದರೆ, ಇಂಗ್ಲೀಷು ಅಂತಾರಾಷ್ಟ್ರೀಯ ವ್ಯಾಪಕತೆಯನ್ನು ಕೊಡುತ್ತದೆ. ಕುಂದೆರಾ ಕೂಡಾ ತನ್ನ ಪುಸ್ತಕದಲ್ಲಿ, ಫ್ಲೆಮಿಶ್ ಮಾತೃಭಾಷೆಯಿರುವ ಗೆಳೆಯ ಇಂಗ್ಲೀಷನ್ನೂ ವ್ಯಾವಹಾರಿಕ ಕಾರಣಗಳಿಗಾಗಿ ಕಲಿಯುತ್ತಿದ್ದಾನೆ ಎಂದು ಬರೆಯುತ್ತಾನೆ. ಆ ಗೆಳೆಯ ಜರ್ಮನ್ ಅಥವಾ ಫ್ರೆಂಚ್ ಭಾಷೆಯನ್ನು ಕಲಿಯಲು ಆಸಕ್ತಿ ತೋರಿಸುವುದಿಲ್ಲ.

ಪಾಕಿಸ್ತಾನದಿಂದ ಬಾಂಗ್ಲಾದೇಶ ಬೇರಾಗಲೂ ಸಂಸ್ಕೃತಿಯೇ ಕಾರಣವಾಯಿತು. ಅಲ್ಲೂ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳೇ ಜಾತಿ, ಮತ ಮತ್ತು ರಾಷ್ಟ್ರೀಯತೆಗಿಂತ ಹೆಚ್ಚು ಪ್ರಮುಖವಾದವು. ನಿಜಕ್ಕೂ ನಮ್ಮ ದೇಶದಲ್ಲೇ ಇದಕ್ಕೆ ಮತ್ತೊಂದು ಉದಾಹರಣೆಯಿದೆ. ಹಳೇ ಹೈದರಾಬಾದ್ ಪ್ರಾಂತವನ್ನು ಮೂರುಭಾಗಗಳಾಗಿ ವಿಭಜನೆ ಮಾಡಿ – ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವೆ ಹಂಚಿದ್ದು ನಿಜ. ಅದನ್ನು ಮಾತೃಭಾಷೆಯ ಭಾಷಾವಾರು ಆಧಾರದ ಮೇಲೆ ವಿಭಜಿಸಲಾಯಿತಾದರೂ, ಆ ಪ್ರಾಂತದಲ್ಲಿ ಹಲವು ತಲೆಮಾರುಗಳ ನಿಜಾಮಿ ಆಡಳಿತದಿಂದ ಬೆಳೆದಿದ್ದ ಭಾಷೆ ಮತ್ತು ಸಂಸ್ಕೃತಿ ಭಿನ್ನವಾಗಿತ್ತು. ರಾಜ್ಯದ ಭಾಷೆ ಫಾರ್ಸಿಯಾಗಿದ್ದರೂ, ಆಡುಮಾತು ದಖ್ಖನಿ ಉರ್ದು, ಮತ್ತು ದಖ್ಖನಿ ತೆಲುಗು–ಮರಾಠಿ–ಕನ್ನಡವಾಗಿತ್ತು. ಹೈದರಾಬಾದು ಭಾರತದಲ್ಲಿ ಏಕೀಕರಣಗೊಂಡು ಭಾಷಾವಾರು ರಾಜ್ಯಗಳಲ್ಲಿ ಹಂಚಿಹೋದಾಗ ನಾವು ಕಳೆದುಕೊಂಡದ್ದು ಹೈದರಾಬಾದಿ ಸಂಸ್ಕೃತಿ ಮತ್ತು ಭಾಷೆಯನ್ನು. ಆದರೆ, ಮಾತೃಭಾಷೆಯ ಆಧಾರದ ಮೇಲೆ ಬಹುಪಾಲು ಜನರ ಆಡುಭಾಷೆಗೆ ಇದು ಅಡ್ಡಿಯಾಗಲಿಲ್ಲವಾದ್ದರಿಂದ ಈ ಏಕೀಕರಣ ಒಂದು ರೀತಿಯ ಸಮತೋಲನದಲ್ಲಿತ್ತು. ಆದರೂ, ಕೆಲವೇ ದಶಕಗಳಲ್ಲಿ ಭಿನ್ನ ತೆಲಂಗಾಣ ಬೇಕೆನ್ನುವ ಬೇಡಿಕೆ ಬಂದದ್ದು ಎಲ್ಲಿಂದ? ಆ ಬೇಡಿಕೆಗೆ ಆರ್ಥಿಕ ಮತ್ತು ರಾಜಕೀಯ ಕಾರಣಗಳನ್ನು ಕೊಡಬಹುದಾದರೂ, ನಿಜಕ್ಕೂ ತೆಲಂಗಾಣದ (ನಿಜಾಮಿ) ಸಂಸ್ಕೃತಿ ಆಂಧ್ರಪ್ರದೇಶದ ಸಂಸ್ಕೃತಿಯಿಂದ